**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.2200/2022**

ಪಿ.ಡಬ್ಲ್ಯೂ: 7

ಸಿ.ಡಬ್ಲ್ಯೂ: 14

ಸಾಕ್ಷಿದಾರರ ಹೆಸರು : ರವಿಕುಮಾರ್

ತಂದೆಯ ಹೆಸರು: :ಸ್ವಾಮಿನಾಯ್ಕ

ವಯಸ್ಸು : **37 ವರ್ಷ**

ಉದ್ಯೋಗ : ವ್ಯವಸಾಯ

ವಾಸಸ್ಥಳ : ಬರಗೇನಹಳ್ಳಿ

**ದಿನಾಂಕ: 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಈಗ್ಗೆ ಸುಮಾರು ಮೂರು ವರ್ಷಗಳ ಹಿಂದೆ ನಾನು ರಂಗೇನಹಳ್ಳಿಯ ಸಂತೆ ಹತ್ತಿರ ಸಂಜೆ 5-30 6-00 ಗಂಟೆ ಸಮಯದಲ್ಲಿ ಮುಖ್ಯ ರಸ್ತೆಯಲ್ಲಿ ಸ್ಪೆಂಡರ್ ದ್ವಿಚಕ್ರ ವಾಹನವು ಬಾವಿಕೆರೆ ಕಡೆಯಿಂದ ಬಂದು ಚಾಸಾ-1 ರವರ ತಾಯಿಯಾದ ಪಾರ್ವತಮ್ಮನವರನ್ನು ಗುದ್ದಿದ ಪರಿಣಾಮ ಅವರು ಅಲ್ಲೇ ಜ್ಞಾನ ತಪ್ಪಿ ಬಿದ್ದಿರುತ್ತಾರೆ. ಅವರನ್ನು ರಂಗೇನಹಳ್ಳಿಯ ಕರಾವಳಿ ಆಸ್ಪತ್ರೆಗೆ ತೋರಿಸಿ, ನಂತರ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಶಿವಮೊಗ್ಗದ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಪಾರ್ವತಮ್ಮ ಮೃತಪಟ್ಟಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **16-05-2022** ರಂದು ಸೋಮವಾಗ ದಿನದಂದು ರಂಗೇನಹಳ್ಳಿ ಗ್ರಾಮದಲ್ಲಿ ಸಂತೆ ಇದ್ದುದರಿಂದ ನಾನು ಹಾಗೂ ಧರಣೇಶ್ ಸಂತೆಗೆ ಹೋಗಿದ್ದೆವು ಎಂದರೆ ಸರಿ. ಮಹೇಂದ್ರರವರ ತಾಯಿ ಪಾರ್ವತಮ್ಮ ರಸ್ತೆ ದಾಟುತ್ತಿರುವಾಗ ತರೀಕೆರೆ ಕಡೆಯಿಂದ ಬಂದ ಕೆಎ **14** ಇ ಯು **3503** ಸ್ಪೆಂಡರ್ ಬೈಕ್ ನ ಚಾಲಕ ಅಶೋಕ್ ರವರು ಬೈಕನ್ನು ಅತೀವೇಗ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಪಾರ್ವತಮ್ಮನವರಿಗೆ ಡಿಕ್ಕಿಪಡಿಸಿದ ಪರಿಣಾಮ ಸದರಿ

ಅಪಘಾತವಾಗಿರುತ್ತದೆ ಎಂದರೆ ಸರಿ. ಪಾರ್ವತಮ್ಮನವರಿಗೆ ತೀವ್ರ ತರಹದ ಪೆಟ್ಟಾಗಿದ್ದ ಕಾರಣ ಚಿಕಿತ್ಸೆ ಫಲಕಾರಿಯಾಗದೆ ಶಿವಮೊಗ್ಗದ ಆಸ್ಪತ್ರೆಯಲ್ಲಿ ಮೃತಪಟ್ಟಿತ್ತಾರೆಂದರೆ ಸರಿ. ಈ ಘಟನೆಯ ಸಂಬಂಧ ನಾನು ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆಂದರೆ ಸರಿ. ಅಪಘಾತಪಡಿಸಿದ ಆರೋಪಿ ಅಶೋಕನನ್ನು ನಾನು ನೋಡಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ</u>** <u>ಶ್ರೀ ಜೆ ಟಿ ಜೆ</u> **<u>ವಕೀಲರಿಂದ.</u>**

ನನ್ನದು ಬರಗೇನಹಳ್ಳಿ. ನಮ್ಮ ಊರಿನಿಂದ ರಂಗೇನಹಳ್ಳಿ 5 ಕಿಮಿ ದೂರದಲ್ಲಿರುತ್ತದೆ. ನಾವು ಸಂತೆ ಮುಗಿಸಿ ಬಸ್ ಸ್ಟಾಪ್ ನಲ್ಲಿ ನಿಂತಿದ್ದೆವು. ನಾವು ಒಂದು ಬ್ಯಾಗ್ ಸಂತೆ ಮಾಡಿರುತ್ತೇವೆ. ಆ ದಿನ ಸಂತೆ ಇದ್ದ ಕಾರಣ ರಸ್ತೆಯಲ್ಲಿ ಬಹಳ ಜನ ಓಡಾಡುತ್ತಿದ್ದರು ಎಂದರೆ ಸರಿ. ಸಂತೆ ಇದ್ದಕಾರಣ ರಸ್ತೆಯಲ್ಲಿ ಬಹಳ ಜನ ಓಡಾಡುತ್ತಿರುವ ಕಾರಣ ವಾಹನಗಳು ವೇಗವಾಗಿ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿ. ಚಾಸಾ-1 ರವರು ರಸ್ತೆಯನ್ನು ದಾಟಿದ್ದರು ಎಂದರೆ ಸರಿ. ಅವರ ತಾಯಿ ರಸ್ತೆ ದಾಟಿರುವುದಿಲ್ಲ, ಮಗ ದಾಟಿದ್ದಾನೆಂದು ಅಚಾನಕ್ಕಾಗಿ ರಸ್ತೆಯ ಎಡಭಾಗದಿಂದ ಬಲಭಾಗಕ್ಕೆ ರಸ್ತೆ ದಾಟಲು ಹೋಗಿರುತ್ತಾರೆಂದರೆ ಸರಿ. ಆರೋಪಿಯ ವಾಹನವು ಎಡಭಾಗದಲ್ಲಿತ್ತು ಎಂದರೆ ಸಾಕ್ಷಿ ಬಲಭಾಗದಲ್ಲಿ ಇತ್ತು ಎಂದು ನುಡಿದಿರುತ್ತಾರೆ. ಆರೋಪಿಯ ವಾಹನ ಬಲಭಾಗದಲ್ಲಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಅಪಘಾತ ಸಂಭವಿಸಿರುವುದಿಲ್ಲ, ಚಾಸಾ-1 ರವರ ತಾಯಿ ಅಚನಾಕ್ಕಾಗಿ ರಸ್ತೆಯ ಮದ್ಯ ಬಂದಿದ್ದರಿಂದ ಸದರಿ ಅಪಘಾತ ಆಗಿರುತ್ತದೆ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ **ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**